ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಕನಕಪುರ

# ಸಿ.ಸಿ. 307/2018

| | | |
|---|---|---|
| ಪಿರ್ಯಾದುದಾರರು | : | ಕೆ.ಬಿ ನಂಜೇಗೌಡ ಬಿನ್ ಬೋಗಯ್ಯ<br>34 ವರ್ಷ, ತಿಗಳರ ಬೀದಿ ಗ್ರಾಮ<br>ಕೋಡಿಹಳ್ಳಿ ಹೋಬಳಿ, ಕನಕಪುರ |
| | | – ವಿರುದ್ಧ – |
| ಆರೋಪಿ | : | ಕುಮಾರ ( ಕೆ ಎಸ್ ಆರ್ ಟಿ ಸಿ )<br>ಬಿನ್ ಕೃಷ್ಣಪ್ಪ ,<br>36 ವರ್ಷ<br>ಸಿನಿಮಾ ಟೇಯಟರ್ ಹತ್ತಿರ<br>ಕೋಡಿಹಳ್ಳಿ ಗ್ರಾಮ ಮತ್ತು ಹೋಬಳಿ<br>ಕನಕಪುರ ತಾಲ್ಲೂಕು. |

:: **ಆಪಾದನೆ** :: 

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ದೋಷಾರೋಪಣೆ ಏನೆಂದರೆ:-**

ಆರೋಪಿಯಾದ ನೀವು ಪಿರ್ಯಾದಿಯಿಂದ 4,00,000/-00 ರೂ. ಹಣವನ್ನು ಕುಟುಂಬದ ನಿರ್ವಹಣೆಗಾಗಿ ಜೂನ್ 2017 ರ ಮೊದಲನೇ ವಾರದಲ್ಲಿ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ವಾಪಸ್ಸು ಕೊಡುವುದಾಗಿ ಒಪ್ಪಿದ್ದು, ಆದರೆ ಹಣವನ್ನು ಕೊಡದೇ, ಸದರಿ ಹಣ ತೀರಿಸುವ ಸಲುವಾಗಿ ದಿಃ 28.08.2017 ರಂದು 2,00,000-00 ರೂ.ಗಳ ಚೆಕ್ಕು ಸಂಖ್ಯೆ 118318 ಮತ್ತು ದಿಃ28.08.2017 ರಂದು 2,00,000-00 ರೂಗಳ ಚೆಕ್ಕು ಸಂಖ್ಯೆ 118317 ಕೆನರಾ ಬ್ಯಾಂಕ್, ಕನಕಪುರ ಶಾಖೆ ಇವರ ಚೆಕ್ಕುಗಳನ್ನು ನೀಡಿದ್ದು ದೂರುದಾರರು ಸದರಿ ಚೆಕ್ಕುಗಳನ್ನು ದಿನಾಂಕ 28.08.2017 ರಂದು ಯುಕೋ ಬ್ಯಾಂಕ್, ಕೋಡಿಹಳ್ಳಿ ಶಾಖೆ ನಗದೀಕರಣಕ್ಕೆ ಸಲ್ಲಿಸಿದಾಗ ದಿಃ31.08.2017 ರಂದು "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ಚೆಕ್ಕು ವಾಪಸ್ಸು ಬಂದಿರುತ್ತದೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ 22.09.2017 ರಂದು ನಿಮಗೆ ತಿಳುವಳಿಕೆ ನೋಟೀಸನ್ನು ಜಾರಿ ಮಾಡಿದ್ದು ಸದರಿ ನೋಟೀಸಿಗೆ ಸರಿಯಾದ ಉತ್ತರ ಕೊಡದೆ, ಚೆಕ್ಕಿನ ಹಣ ಪಾವತಿ ಮಾಡದೆ, ನೀವು ಉದ್ದೇಶಪೂರ್ವಕವಾಗಿ ಅಕೌಂಟ್ ನಲ್ಲಿ ಸಾಕಷ್ಟು ಹಣವಿಲ್ಲವೆಂಬ ವಿಚಾರವನ್ನು ತಿಳಿದಿದ್ದು ಆ ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸ್ ಟ್ರುಮೆಂಟ್ ಕಾಯಿದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

CC 307/2018

ಸದರಿ ಅಪರಾಧಗಳು ಈ ನ್ಯಾ ಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 12.12.2025 ರಂದು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾ ಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ

**ಆರೋಪಿಯ ಹೇಳಿಕೆ**

ಪ್ರಶ್ನೆ-1 ಇದೀಗ ಓದಿ ಹೇಳಿದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 12.12.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಕನಕಪುರ**

**ಆರೋಪಿಯ ಸಹಿ :**